**ಮೂ.ದಾ.ನಂ.48/2016**

ಪಿ.ಡಬ್ಲ್ಯು2

(ಇಂದು ದಿನಾಂಕ: 15-01-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ ಶ್ರೀ. ಡಿ. ಎಸ್. ಭಟ್ಟ ವಕೀಲರಿಂದಃ**

ನನ್ನ ಪ್ರಮಾಣ ಪತ್ರದಲ್ಲಿ ನಮೂದಿಸಿರುವ ತಿರುಗಾಡುವ ಓಣಿಯನ್ನು ನಾನು ನನ್ನ ದಿನನಿತ್ಯದ ಬಳಕೆಗಾಗಿ ಹಾಗೂ ನನ್ನ ಆಸ್ತಿಯ ಸಾಗುವಳಿಗಾಗಿ ನಾನು ಉಪಯೋಗಿಸುವುದಿಲ್ಲ ಎಂದರೆ ಸರಿ. ಸದ್ರಿ ಓಣಿಯು ಜನ ಸಂಪರ್ಕ ಇರುವ ಒಂದು ಕೇರಿಯಿಂದ ಇನ್ನೋಂದು ಕೇರಿಯನ್ನು ಸಂಪರ್ಕಿಸುವ ಓಣಿಯಾಗಿರುವುದಿಲ್ಲ ಎಂದರೆ ಸರಿ. ವಾದಿಯರ ವಾಸ್ತವ್ಯದ ಮನೆ ಇರುವ ಸರ್ವೆ ನಂಬರ ನನಗೆ ತಿಳಿದಿದೆ. ವಾದಿಯರು ವಾಸ್ತವ್ಯ ಇರುವ ಮನೆ ಕಂಪೌಂಡನ ಒಳಗೆ ಯಾವುದೇ ಭಾವಿಗಳು ಇರುವುದಿಲ್ಲ. ವಾದಿಯರು ಕುಡಿಯಲು ನೀರು ತರುವ ಬಾವಿ ಹಾಗೂ ಅವರು ಅವರ ಭಾಗಾಯತಕ್ಕೆ ನೀರು ಉಣಿಸುವ ಭಾವಿಯು ಯಾವ ಸರ್ವೆ ನಂಬರದಲ್ಲಿ ಇದೆ ಎಂದು ನನಗೆ ಗೊತ್ತಿಲ್ಲ.

ನಾನು ನನ್ನ ಮುಖ್ಯ ಪ್ರಮಾಣ ಪತ್ರದಲ್ಲಿ ನಮೂದಿಸಿದ ಓಣಿಯು ನಾಗೇಶ ವೆಂಕಟ್ರಮಣ ಭಟ್ಟ ಇವರ ಜಾಗದಿಂದ ಪ್ರಾರಂಭವಾಗಿ ಸದ್ರಿ ಓಣಿಯು ಅಲ್ಲಿಂದ ಮುಂದೆ ಬಲಕ್ಕೆ ಹೋಗಿ ಖರಾಬಕ್ಕೆ ಹೋಗಿ ಮತ್ತೆ ಎಡಕ್ಕೆ ತಿರುಗಿ ನಂತರ ಸುಬ್ರಾಯ ಕೃಷ್ಣ ಭಟ್ಟ, ಸಾಂಬಾ ಸದಾಶಿವ ಕೃಷ್ಣ ಭಟ್ಟ ಇವರ ಗಡಿಯ ಮೇಲೆ ಈಶ್ವರ ರಾಮಾ ಭಟ್ಟ ಇವರ ಜಾಗದಲ್ಲಿರುವ ಮೆಟ್ಟಿಲನ್ನು ಇಳಿದು ಸುಬ್ರಾಯ ಕೃಷ್ಣ ಭಟ್ಟ ಹಾಗೂ ಈಶ್ವರ ರಾಮ ಭಟ್ಟ ಇವರ ಗಡಿಯಲ್ಲಿ ತಿರುಗಿ ವಾದಿಯ ಜಾಗಕ್ಕೆ ಹೋಗುತ್ತದೆ. ನಾನು ಈ ಮೇಲೆ ಹೇಳಿದಂತಹ ಖರಾಬ ಜಾಗವು ಯಾವ ಸರ್ವೆ ನಂಬರಗೆ ಸೇರಿದ್ದು ನನಗೆ ಗೊತ್ತಿಲ್ಲ. ಸದ್ರಿ ಖರಾಬ ಜಾಗದಲ್ಲಿ ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತಹ ಓಣಿಯ ಎಷ್ಟು ಉದ್ದ ಹಾಗೂ ಅಗಲ ಎಂದು ನನಗೆ

ನಿಖರವಾಗಿ ಹೇಳಲು ಬರುವುದಿಲ್ಲ. ಸದ್ರಿ ದಾರಿಯು ಖರಾಬಿನ ಕ್ಷೇತ್ರದಲ್ಲಿ ಅಂದಾಜು 30 ಫೂಟು ಉದ್ದ ಹಾಗೂ 3 ಫೂಟು ಅಗಲದಲ್ಲಿ ಹಾದು ಹೋಗಿರುತ್ತದೆ. ಸುಬ್ರಾಯ ಕೃಷ್ಣ ಭಟ್ಟ, ಸಾಂಬಾ ಸದಾಶಿವ ಕೃಷ್ಣ ಭಟ್ಟ ಇವರ ಗಡಿಯ ಮೇಲಿನ ಯಾವ ಸರ್ವೆ ನಂಬರದಲ್ಲಿ ಸದ್ರಿ ಓಣಿಯು ಹಾದು ಹೋಗಿರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ.

ಸುಬ್ರಾಯ ಕೃಷ್ಣ ಭಟ್ಟ ಹಾಗೂ ಈಶ್ವರ ರಾಮ ಭಟ್ಟ ಇವರ ಗಡಿಯಲ್ಲಿ ಯಾವ ಸರ್ವೆ ನಂಬರದಲ್ಲಿ ಸದ್ರಿ ಓಣಿಯು ಹಾದು ಹೋಗಿರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ. ವಾದಿಯರ ವಾಸ್ತವ್ಯದ ಮನೆಯಿಂದ ವಾದಿಯರ ಭಾಗಾಯತದವರೆಗೆ ಮೇಲೆ ಹೇಳಿದ ಓಣಿಯು ಎಷ್ಟು ಫೂಟ ಉದ್ದ ಹಾಗೂ ಅಗಲ ಇದೆ ಎಂದು ನನಗೆ ಮಾಹಿತಿ ಇರುವುದಿಲ್ಲ. ವಾದಿಯರ ವಾಸ್ತವ್ಯದ ಮನೆಯಿಂದ ವಾದಿಯರ ಭಾಗಾಯತದವರಗೆ ಈ ಓಣಿ ದಾರಿಯಲ್ಲಿ ಎರಡು ಸಂಕಗಳು ಇವೆ. ಸದ್ರಿ ಸಂಕಗಳನ್ನು ವಾದಿಯರು ನಿರ್ಮಿಸಿರುತ್ತಾರೆ. ಒಂದು ಸಂಕವು ಚಿಕ್ಕೇರಿ ಓಣಿಗೆ ಹಾಕಿದ ಸಂಕವಾಗಿದ್ದು, ಇನ್ನೋಂದು ಸಂಕವು ಗೋಪಿಹಳ್ಳಕ್ಕೆ ಹಾಕಿದ ಸಂಕವಾಗಿರುತ್ತದೆ. ಸದ್ರಿ ಓಣಿಯು ವಾದಿಯರ ಅನುಕೂಲಕ್ಕೆ ತಕ್ಕಂತೆ ಮಾಡಿಕೊಂಡ ಕಾಲುದಾರಿಯಾಗಿರುತ್ತದೆ.

ನಾನು ನನ್ನ ಮಖ್ಯ ವಿಚಾರಣೆಯಲ್ಲಿ ಹೇಳಿದ ನೀರಿನ ಪೈಪ್ 3ನೇ ಪ್ರತಿವಾದಿಯ ಜಾಗದಿಂದ ಪ್ರಾರಂಭವಾಗಿ 4ನೇ ಪ್ರತಿವಾದಿಯ ಜಾಗಕ್ಕೆ ಹೋಗಿ ಅಲ್ಲಿಂದ 1 ಹಾಗೂ 2ನೇ ಪ್ರತಿವಾದಿಯ ಜಾಗದ ಗಡಿಯಲ್ಲಿ ಹಾದು ಹೋಗಿ ಒಂದು ಎತ್ತರದ ದನಪೆಯ ಮುಖಾಂತರ ಮೇಲಕ್ಕೆ ಹೋಗಿ ಓಣಿಯ ಮುಖಾಂತರ ವಿನಾಯಕ ನರಸಿಂಹ ಭಟ್ಟ ಇವರ ಜಾಗದಿಂದ 1ನೇ ವಾದಿಯ ಮನೆಗೆ ನೀರಿನ ಪೈಪ್ ಹೋಗಿರುತ್ತದೆ.

**ಮೂ.ದಾ.ನಂ.48/2016**

ಪಿ.ಡಬ್ಲ್ಯು.2

1ನೇ ವಾದಿಯ ಮನೆಯ ಉತ್ತರ ದಿಕ್ಕಿಗೆ ರಾಜ್ ರಸ್ತೆಯು ಪೂರ್ವ ಪಶ್ಚಿಮವಾಗಿ ಹಾದು ಹೋಗಿರುತ್ತದೆ. ವಾದಿಯ ಮನೆಯ ಉತ್ತರ ದಿಕ್ಕಿನಿಂದ ದಕ್ಷಿಣ ದಿಕ್ಕಿನ ಬಯಲು ಪ್ರದೇಶದವರೆಗೆ ಸ್ಥಳವು ಇಳಿಜಾರು ಆಗಿದೆ ಎಂದರೆ ಸರಿ.

ನಾನು ಹಾಗೂ ನನ್ನ ಅಣ್ಣನು ಸೇರಿ ಮಹಾದೇವ ವೆಂಕಟಪ್ಪ ಮಡಿವಾಳ ಹಾಗೂ ಗಣಪಿ ಕೋಂ ಜಟ್ಟಿ ಮಡಿವಾಳ ಇವರ ವಿರುದ್ಧ ಕುಮಟಾ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ವ್ಯಾಜ್ಯವನ್ನು ಹೂಡಿದ್ದೇವೆ ಎಂದರೆ ಸಾಕ್ಷಿಯು ನನ್ನ ತಂದೆಯವರು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸ್ದರ್ರಿ ದಾವೆಯು ನನ್ನ ತಂದೆಯ ಜೀವಿತಾವಧಿಯಲ್ಲಿ ಮುಗಿದು ಹೋಗಿರುತ್ತದೆ. ನಾನು ಈ ಮೇಲೆ ಹೇಳಿದ ವ್ಯಾಜ್ಯದ ಕುರಿತಾಗಿ ನಮ್ಮ ಹಾಗೂ ಮಹಾದೇವ ವೆಂಕಪ್ಪ ಮಡಿವಾಳ ಇವರ ನಡುವೆ ಹಲವಾರು ಕ್ರಿಮಿನಲ್ ಫಿರ್ಯಾದಿಗಳನ್ನು ಪೊಲೀಸ್ ಠಾಣೆಗೆ ನೀಡಿದ್ದೇವೆ ಎಂದರೆ ಸರಿ. ಇದರಿಂದಾಗಿ ನಾನು ಖಿನ್ನತೆಗೆ ಒಳಪಟ್ಟು ಶಿವಮೊಗ್ಗ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ನನಗೆ ಈ ವ್ಯಾಜ್ಯದ ಕುರಿತಾಗಿ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಕೂಡ 1ನೇ ವಾದಿಯು ನನ್ನ ಪುರೋಹಿತವಾಗಿರುವುದರಿಂದ ಅವರಿಗೆ ಪೂರಕವಾದ ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ನನ್ನ ಪ್ರಮಾಣ ಪತ್ರದಲ್ಲಿ ಹೇಳಿರುವಂತೆ ಯಾವುದೇ ಕಾಲುದಾರಿ ಇಲ್ಲ ಎಂದರೆ ಸರಿಯಲ್ಲ. ಸ್ದರ್ರಿ ಕಾಲುದಾರಿ ಇರುವುದನ್ನು ವಾದಿಯರು ಬಸಸಿಕೊಳ್ಳುತ್ತಿಲ್ಲ ಎಂದರೆ ಸರಿಯಲ್ಲ. ಯಾವುದೇ ನೀರಿನ ಪೈಪ್ ಪ್ರತಿವಾದಿಯರ ಜಾಗದಲ್ಲಿ ಹಾದು ಹೋಗಲಿಲ್ಲ ಎಂದರೆ ಸರಿಯಲ್ಲ. ವಾದಿಯರು ಅವರ ಭಾಗಾಯತ ಸ್ಥಳಕ್ಕೆ ಅಬ್ಬಿ ಓಣಿಯ ಮುಖಾಂತರ ಹೋಗಿ ಸಾಗುವಳಿಯನ್ನು ಮಾಡಿರುತ್ತಾರೆ ವಿನಃ ಅವರು ಪ್ರತಿವಾದಿಯರ ಜಾಗದಲ್ಲಿ ಯಾವುದೇ ಕಾಲುದಾರಿ ಇಲ್ಲ ಎಂದರೆ ಸರಿಯಲ್ಲ.

**ಮೂ.ದಾ.ನಂ.48/2016**

ಪಿ.ಡಬ್ಲ್ಯು2

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಹೆಚ್ಚುವರಿ ಸಿವಿಲ್ ಜಡ್ಜ, ಕುಮಟಾ